Rotary ರೋಟರಿ **ಐಸಿರಿ** ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD


Rtn. Francesco Arezzo
R.I. President


Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 26
ದಿನಾಂಕ: 30.12.2025


Rtn. Anil Kumar
President


Rtn. Krishnappa
Secretary

**2026ನೇ ವರ್ಷವು ನಮ್ಮೆಲ್ಲರ ಜೀವನದಲ್ಲಿ ಸುಖ, ಶಾಂತಿ ಮತ್ತು ಸಮೃದ್ಧಿಯನ್ನು ತರಲಿ. ರೋಟರಿ ಐಸಿರಿ ಕುಟುಂಬದ ಸರ್ವರಿಗೂ ಸನ್ಮಂಗಳವನ್ನುಂಟು ಮಾಡಲಿ ಎಂಬ ಹಾರೈಕೆಯೊಂದಿಗೆ 26ನೇ ಸಂಚಿಕೆ ನಿಮ್ಮ ಮುಂದೆ!**

## 2026ರಿಂದ ರೋಟರಿ ಸಂಸ್ಥೆಯಲ್ಲಾಗುವ ಬದಲಾವಣೆಗಳು

2026 ನೇ ಇಸವಿಯಿಂದ, ರೋಟರಿ ಇಂಟರ್ನ್ಯಾಷನಲ್ ತನ್ನ ಬ್ರ್ಯಾಂಡಿಂಗ್ ಮತ್ತು ನಾಯಕತ್ವದಿಂದ ಹಿಡಿದು ಅದರ ಪ್ರಮುಖ ಜಾಗತಿಕ ಸಭೆಗಳವರೆಗೆ ಹಲವಾರು ಮಹತ್ವದ ಬದಲಾವಣೆಗಳನ್ನು ಜಾರಿಗೆ ತರುತ್ತಿದೆ.

**ಪೋಲಿಯೊ ಮೇಲ್ವಿಚಾರಣಾ ಮಂಡಳಿ:** ಮೊದಲ ಬಾರಿಗೆ, ರೋಟರಿ ಪ್ರತಿನಿಧಿ ಮೈಕೆಲ್ ಮೆಕ್‌ಗವರ್ನ್, ಜನವರಿ 1, 2026 ರಿಂದ ಜಾಗತಿಕ ಪೋಲಿಯೊ ನಿರ್ಮೂಲನಾ ಉಪಕ್ರಮದ ಪೋಲಿಯೊ ಮೇಲ್ವಿಚಾರಣಾ ಮಂಡಳಿಯ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

**2026ರ ರೋಟರಿ ಅಂತರರಾಷ್ಟ್ರೀಯ ಸಮಾವೇಶವು** ತೈಪೆ, ತೈವಾನ್ ನಲ್ಲಿ ಜೂನ್ 13 ರಿಂದ 17ರ ತನಕ ನಡೆಯಲಿದ್ದು, 30,000ಕ್ಕೂ ಹೆಚ್ಚು ಸದಸ್ಯರು ಭಾಗವಹಿಸುವ ನಿರೀಕ್ಷೆಯಿದೆ.

2026–2027ನೇ ಸಾಲಿನ ರೋಟರಿ **ಅಂತರರಾಷ್ಟ್ರೀಯ ಅಧ್ಯಕ್ಷ**ರಾಗಲಿರುವ ಒಲೈಂಕಾ ಹಕೀಮ್ ಬಬಲೋಲಾ ಅವರು ಜುಲೈ 1, 2026 ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅವರು ನೈಜೀರಿಯಾದಿಂದ ರೋಟರಿ ಸಂಸ್ಥೆಯನ್ನು ಮುನ್ನಡೆಸಿದ ಮೊದಲ ವ್ಯಕ್ತಿಯಾಗಿರುತ್ತಾರೆ.

## ಶ್ರೀ ಕೃಷ್ಣ ಗೀತಾನುಗ್ರಹ ಪ್ರಶಸ್ತಿ



ಪರ್ಯಾಯ ಶ್ರೀ ಪುತ್ತಿಗೆ ಶ್ರೀ ಕೃಷ್ಣ ಮಠದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಕೊಡಮಾಡಿದ "ಶ್ರೀಕೃಷ್ಣ ಗೀತಾನುಗ್ರಹ" ಪ್ರಶಸ್ತಿ ಸ್ವೀಕರಿಸಿದ, ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ, ರೋಟರಿ ಐಸಿರಿಯ ನಿಯೋಜಿತ ಅಧ್ಯಕ್ಷ ರೊ. ಸಂದೀಪ್ ಕುಮಾರ್ ಅವರಿಗೆ ಹಾರ್ದಿಕ ಅಭಿನಂದನೆಗಳು. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ವ್ಯಕ್ತಿಗಳನ್ನು ಗುರುತಿಸಿ ಈ ಗೌರವವನ್ನು ಅರ್ಪಿಸಲಾಗುತ್ತದೆ.

## 23/12/2025ರ ವಾರದ ಸಭೆಯಲ್ಲಿ ರೊ. ಡಾ. ಸ್ವಾತಿ ಪೈಯವರ ಬಗ್ಗೆ ಅಭಿಮಾನದ ಮಾತುಗಳು

ರೊ. ಡಾ. ಸ್ವಾತಿ ಪೈಯವರು ನಿಜವಾಗಿಯೂ **ಐಸಿರಿಯ ಐಕಾನ್**. ಅವರು ಸ್ವ ಆಸಕ್ತಿಯಿಂದ ಶಿವಮೊಗ್ಗದಲ್ಲಿ ನಡೆದ ಡಿಸ್ಟ್ರಿಕ್ಟ್ ಸ್ಪೋರ್ಟ್ಸ್ ಇವೆಂಟ್ ನಲ್ಲಿ ತನ್ನ ಇಬ್ಬರೂ ಮಕ್ಕಳ ಜೊತೆ ಭಾಗವಹಿಸಿ, ಮೂವರೂ ಬಹುಮಾನಗಳನ್ನು ಗೆದ್ದದ್ದು, ಈ ಹಿಂದೆಯೂ ಕಲ್ಚರಲ್ಸ್ ಮತ್ತು ಸ್ಪೋರ್ಟ್ಸ್ ಇವೆಂಟ್ಸ್ ಗಳಲ್ಲಿ ಅವರು ಗಮನಾರ್ಹ ಕೊಡುಗೆ ನೀಡಿದ್ದಾರೆ. ಐಸಿರಿಗೆ ಗರಿಮೆತಂದ ಅವರು ಅಭಿನಂದನಾರ್ಹರು.

– **ರೊ. ಸಂದೀಪ್ ಕುಮಾರ್**



ಅಂದಿನ ಸಭೆಯಲ್ಲಿ ವಲಯ ಸೇನಾನಿ ರೊ. PHF. ಸ್ಮಿತಾ ಕಾಮತ್, ಜಿಲ್ಲಾ ಆರ್.ಸಿ.ಸಿ. ಉಪಸಭಾಪತಿ ರೊ. PHF. ಗುರುಪ್ರಸಾದ್ ಕಾಮತ್, ರೊ. PHF. ಪಾಂಡುರಂಗ ಲಾಗ್ವನ್‌ಕರ್ ಮೊದಲಾದವರೂ ರೊ. ಡಾ. ಸ್ವಾತಿ ಪೈಯವರ ಯವರ ಕೊಡುಗೆಗಾಗಿ ಅವರನ್ನು ಅಭಿನಂದಿಸಿದರು.

ರೊ. ಡಾ. ಸ್ವಾತಿ ಪೈ ಅವರು ನಮಗೆಲ್ಲರಿಗೂ **ರೋಲ್ ಮಾಡೆಲ್**. ಅವರು ತನ್ನ ವೈದ್ಯಕೀಯ ವೃತ್ತಿಯ ಕಾರ್ಯ ಒತ್ತಡದ ನಡುವೆಯೂ ರೋಟರಿಯ ಝೋನಲ್ ಮತ್ತು ಡಿಸ್ಟ್ರಿಕ್ಟ್ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಇವೆಂಟ್ಸ್ ಮತ್ತು ತಯಾರಿಯಲ್ಲಿ ಭಾಗವಹಿಸಿ, ಐಸಿರಿ ತಂಡವನ್ನು ನಿರ್ವಹಿಸಿದ ರೀತಿ ಎಲ್ಲರಿಗೂ ಆದರ್ಶಪ್ರಾಯ. ಅವರು ಅಭಿನಂದನಾರ್ಹರು.

– **ರೊ. ಅಶೋಕ್ ನಾಯಕ್**



## ಗ್ಲಾಸಿನಲ್ಲಿ ನೀರು ಅರ್ಧ ತುಂಬಿರುವುದು.....

**Ann ಪಲ್ಲವಿ ಆರ್. ಶೆಣೈ**

ವಲಯ ತರಬೇತುದಾರರು, ಜೆಸಿಐ ಇಂಡಿಯಾ




ಒಂದು ಗಾಜಿನ ಲೋಟದಲ್ಲಿ ಅರ್ಧದಷ್ಟು ನೀರು ತುಂಬಿಸಿ, ಅದನ್ನು ತೋರಿಸಿ ಪ್ರಶ್ನಿಸಿದಾಗ, "ಅರ್ಧ ತುಂಬಿದೆ" ಎಂದು ಹೇಳುವವರನ್ನು ಸಕಾರಾತ್ಮಕವಾಗಿ ಯೋಚಿಸುವವರು ಎಂದೂ, "ಅರ್ಧ ಖಾಲಿ ಇದೆ" ಎಂದು ಹೇಳುವವರನ್ನು ಎಲ್ಲದರಲ್ಲೂ ಕೊರತೆಯನ್ನು ನೋಡುವ ನಕಾರಾತ್ಮಕ ಮನೋಭಾವದವರು ಎಂದೂ ಹೇಳುತ್ತಾರಂತೆ!

ಆದರೆ, ಯಾವುದೇ ವಿಷಯವನ್ನು ನೋಡುವ ದೃಷ್ಟಿಕೋನ – (perspective) ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ ಎನ್ನುವುದು ನನ್ನ ಅನಿಸಿಕೆ.

"ಗ್ಲಾಸ್ ಅರ್ಧ ಖಾಲಿ ಇದೆ" ಎಂದು ಹೇಳುವ ವ್ಯಕ್ತಿಯಲ್ಲಿಯೇ, ಅದರೊಳಗೆ ಇನ್ನೂ ನೀರನ್ನು ತುಂಬಲು ಅವಕಾಶವಿದೆ ಎಂಬ ಸಕಾರಾತ್ಮಕ ಭಾವನೆಯೂ ಇರಬಹುದು.

ಯಾಕೆಂದರೆ, ಖಾಲಿ ಜಾಗವೇ ಹೊಸ ಭರವಸೆಗೆ ಆಹ್ವಾನ. ಎಲ್ಲಿ ಜಾಗ (space) ಇರುತ್ತದೋ, ಅಲ್ಲಿ ಮಾತ್ರ ಹೊಸತನ, ಹೊಸ ಆಲೋಚನೆಗಳು, ಹೊಸ ಗುರಿಗಳು, ಹಾಗೆಯೇ ಇನ್ನೂ ಅನೇಕ ವಿಚಾರಗಳನ್ನು ತುಂಬಲು ಸಾಧ್ಯ.

ಇನ್ನೂ ಕೆಲವರಿಗೆ ಗ್ಲಾಸ್ full ಇದೆಯೋ ಅಥವಾ empty ಇದೆಯೋ ಎನ್ನುವ ವಿಚಾರವೇ ಅನಗತ್ಯವಾಗಿರಬಹುದು. ನೀರು ಕುಡಿಯಲು ಯೋಗ್ಯವಾಗಿದ್ದರೆ ಕುಡಿಯುತ್ತಾರೆ, ಇಲ್ಲವೇ ಗಿಡಗಳಿಗೆ ಹಾಕುತ್ತಾರೆ. ಅವರಿಗೆ ಮುಖ್ಯವಾದುದು ಲೇಬಲ್ ಅಲ್ಲ – ಉಪಯೋಗ.

ವೇಗವಾಗಿ ಬದಲಾಗುತ್ತಿರುವ ಈ ಜಗತ್ತಿನಲ್ಲಿ, ಉಂಟಾಗುವ ಪ್ರತಿಯೊಂದು ಪ್ರಶ್ನೆಗೂ ಒಂದೇ ಉತ್ತರ ಇರುವುದಿಲ್ಲ.

ಪ್ರತಿಯೊಬ್ಬರೂ ತಮ್ಮ ಮನೋಭಾವ, ಅನುಭವ ಮತ್ತು ಅಗತ್ಯಕ್ಕೆ ತಕ್ಕಂತೆ ತಮ್ಮದೇ ಉತ್ತರವನ್ನು ಕಂಡುಕೊಳ್ಳುತ್ತಾರೆ.

ಅಂತಿಮವಾಗಿ ಪ್ರಶ್ನೆ ಇದು –

ವಿಷಯ, ವಿಚಾರ, ವಸ್ತು, ಪರಿಸ್ಥಿತಿ ಏನು ಅನ್ನುವುದು ಮಾತ್ರವಲ್ಲದೇ, ನಾವು ಅದನ್ನು ಹೇಗೆ ಬಳಸುತ್ತೇವೆ ಎಂಬುದೇ ಹೆಚ್ಚು ಮಹತ್ವದ್ದಲ್ಲವೇ?

## ಮಾನವೀಯತೆ



**ರೊ.PHF. ಸುನೀಲ್ ಕುಮಾರ್**

ಸಂಘಸೇವಾ ನಿರ್ದೇಶಕರು

ಮನೆಗೆ ಹೊರಟಿದ್ದೆ, ಎಲೆಕ್ಟ್ರಿಕ್ ಕಂಬಕ್ಕೆ ಯಾರೋ ಒಂದು ಬೋರ್ಡ್ ನೇತು ಹಾಕಿದ್ದರು. ಅದರಲ್ಲಿ ಏನು ಬರೆದಿರಬಹುದು ಎಂದು ಕುತೂಹಲ ಉಂಟಾಗಿ ನೋಡಿದರೆ, ಅದರಲ್ಲಿ ಬರೆದಿತ್ತು "ಈ ರಸ್ತೆಯಲ್ಲೆಲ್ಲೊ ಐವತ್ತು ರೂಪಾಯಿಯನ್ನು ಕಳೆದುಕೊಂಡಿದ್ದೇನೆ. ನಿಮಗೆ ಯಾರಿಗಾದರೂ ಸಿಕ್ಕರೆ, ಈ ವಿಳಾಸದಲ್ಲಿರುವ ನನಗೆ ತಲುಪಿಸಿ. ನನ್ನ ಕಣ್ಣಿನ ದೃಷ್ಟಿ ತುಸು ಮಂಜಾಗಿದೆ ದಯವಿಟ್ಟು ಸಹಾಯ ಮಾಡಿ".

ನಾನು ಆ ವಿಳಾಸವನ್ನು ಗಮನಿಸಿದೆ, ಅಲ್ಲಿರುವ ವ್ಯಕ್ತಿಯನ್ನು ನೋಡಬೇಕು ಎಂದು ಬಲವಾಗಿ ಅನಿಸಿತು. ಆ ವಿಳಾಸದ ಬಳಿ ಹೋದಾಗ ಗುಡಿಸಲಿನಂತ ಮನೆಯ ಮುಂದೆ ಮುದುಕಿಯೊಬ್ಬಳು ಕುಳಿತಿದ್ದಳು. ಆಕೆ ಬಸವಳಿದಿದ್ದಳು ನಾನು ಬರುತ್ತಿರುವ ಸದ್ದನ್ನು ಕೇಳಿ ಯಾರು? ಎಂದಳು. "ನಾನು ಅಜ್ಜಿ, ಈ ದಾರಿಯಲ್ಲಿ ಬರುವಾಗ ಐವತ್ತು ರೂಪಾಯಿ ಸಿಕ್ಕಿತು. ಕರೆಂಟ್ ಕಂಬದ ಮೇಲೆ ಬರೆದ ಬೋರ್ಡ್ ನೋಡಿದೆ. ನಿಮಗೆ ಕೊಟ್ಟು ಹೋಗೋಣ ಎಂದು ಬಂದೆ" ಅಂದೆ.

ನನ್ನ ಮಾತು ಕೇಳಿ ಅವಳ ಕಣ್ಣು ತೇವವಾದವು. ಈಗಾಗಲೆ 40–50 ಮಂದಿ ಬಂದು ದಾರಿಯಲ್ಲಿ ತಮಗೆ ಐವತ್ತು ರೂಪಾಯಿ ಸಿಕ್ಕಿತೆಂದು ಕೊಟ್ಟು ಹೋಗಿದ್ದಾರೆ. ಆಷ್ಟಕ್ಕೂ ಆ ಕರೆಂಟ್ ಕಂಬದ ಮೇಲೆ ನಾನು ಬೋರ್ಡ್ ನೇತು ಹಾಕಿಲ್ಲ ನನಗೆ ಓದಲು ಬರೆಯಲು ಬರುವುದಿಲ್ಲ, ಎಂದಳು. ಪರವಾಗಿಲ್ಲ ಐವತ್ತು ರೂಪಾಯಿ ಇಟ್ಟುಕೊಳ್ಳಿ ಎಂದೆ.

ನೀವು ಇಲ್ಲಿಂದ ಹೋಗುವಾಗ ಆ ಕಂಬದ ಮೇಲೆ ಬರೆದ ಬೋರ್ಡ್ ತೆಗೆದುಹಾಕಿ ಎಂದು ನನ್ನನ್ನು ವಿನಂತಿಸಿದಳು. ಸೋಜಿಗವೆಂದರೆ ತನ್ನನ್ನು ನೋಡಲು ಬಂದವರಿಗೆಲ್ಲ ಬೋರ್ಡ್ ತೆಗೆದು ಹಾಕುವಂತೆ ಹೇಳುತ್ತಿದ್ದಳು. ಆದರೆ ಯಾರೂ ಹಾಗೆ ಮಾಡಿರಲಿಲ್ಲ!

ನಾನು ವಾಪಸ್ ಬರುವಾಗ ಯೋಚಿಸಲಾರಂಬಿಸಿದೆ, ಕರೆಂಟ್ ಕಂಬದ ಮೇಲೆ ಯಾರು ಈ ಬೋರ್ಡ್ ತಗುಲಿ ಹಾಕಿರಬಹುದು... ತನ್ನನ್ನು ನೋಡಲು ಬಂದವರಿಗೆಲ್ಲ ಅದನ್ನು ತೆಗೆದು ಹಾಕಿ ಎಂದು ಹೇಳಿದರೂ ಯಾರೂ ತೆಗೆದು ಹಾಕಲಿಲ್ಲ... ಯಾರೋ ಒಬ್ಬನಿಗೆ ಆ ಮುದುಕಿಗೆ ಸಹಾಯ ಮಾಡಬೇಕೆಂದು ಅನಿಸಿರಬೇಕು, ಆತ ಬೋರ್ಡ್ ಅನ್ನು ಹಾಕಿರಬೇಕು... ಒಬ್ಬರಿಗೆ ಸಹಾಯ ಮಾಡಬೇಕು ಅನಿಸಿದರೆ ಎಷ್ಟೊಂದು ದಾರಿಗಳಿವೆಯಲ್ಲ.

ಅಷ್ಟೊತ್ತಿಗೆ ಯಾರೋ ಕರೆದಂತಾಯಿತು. "ಸಾರ್ ಈ ಅಡ್ರೆಸ್ ನಲ್ಲಿರುವ ವ್ಯಕ್ತಿಯನ್ನು ಭೇಟಿ ಮಾಡುವುದು ಹೇಗೆ? ಅಲ್ಲಿಗೆ ಹೋಗುವುದು ಹೇಗೆ? ನನಗೆ ದಾರಿಯಲ್ಲಿ ಐವತ್ತು ರೂಪಾಯಿ ಸಿಕ್ಕಿತು. ಅವರಿಗೆ ತಲುಪಿಸಬೇಕಾಗಿದೆ" ಎಂದು ದಾರಿಹೋಕನೊಬ್ಬ ಹೇಳಿದ.

ನಾನು ಗದ್ಗದಿತನಾದೆ! ಮಾನವೀಯತೆಯ ಒರತೆ ಮಾತ್ರ ಎಂದಿಗೂ ಬತ್ತುವುದಿಲ್ಲ ಅದು ಎಲ್ಲಾದರೂ ಜಿನುಗುತ್ತಲೆ ಇರುತ್ತದೆ ಎಂಬ ಮಾತು ಎಷ್ಟು ಸತ್ಯ ಅಲ್ಲವೆ...?

## ಬೌದ್ಧಿಕ ಸಿರಿ ಅವಮಾನಕ್ಕೆ ಸಾಧನೆಯೇ ಉತ್ತರ!

ಇತಿಹಾಸ ಕೆಲವೊಮ್ಮೆ ಮೌನವಾಗಿ ಪಾಠ ಕಲಿಸುತ್ತದೆ.

1990ರ ದಶಕದಲ್ಲಿ, ಟಾಟಾ ಮೋಟರ್ಸ್ ನಿರ್ಮಿಸಿದ ಇಂಡಿಕಾ ಸಂಪೂರ್ಣವಾಗಿ ಭಾರತದಲ್ಲೇ ವಿನ್ಯಾಸಗೊಂಡ, ಅಭಿವೃದ್ಧಿ ಪಡಿಸಲಾದ ಮೊದಲ ಪ್ಯಾಸೆಂಜರ್ ಕಾರು. ಭಾರತೀಯ ಉದ್ಯಮದ ಹೆಮ್ಮೆಯ ಸಂಕೇತವಾಗಿತ್ತು. ಆದರೆ. ತಾಂತ್ರಿಕ ಸವಾಲುಗಳು ಮತ್ತು ಆರ್ಥಿಕ ಒತ್ತಡಗಳ ನಡುವೆ, ಇಂಡಿಕಾ ಯೋಜನೆ ಟಾಟಾ ಮೋಟರ್ಸ್‌ಗೆ ಭಾರವಾಗತೊಡಗಿತು.

ರತನ್ ನವಲ್ ಟಾಟಾ ಅವರು ಫೋರ್ಡ್ ಕಂಪನಿಗೆ ಇಂಡಿಕಾ ಮಾರಾಟ ಅಥವಾ ಸಹಭಾಗಿತ್ವದ ಪ್ರಸ್ತಾವನೆ ಇಟ್ಟರು. ಆದರೆ ಅಂದಿನ ವಿದೇಶಿ ಫೋರ್ಡ್ ಮುಖ್ಯಸ್ಥರು ತೋರಿದ ವರ್ತನೆ, "ಪ್ಯಾಸೆಂಜರ್ ಕಾರ್ ವಿಭಾಗದಲ್ಲಿ ಅನುಭವವಿಲ್ಲದ ನಿಮಗೆ ಆ ಉಸಾಬರಿ ಏಕೆ ಬೇಕಿತ್ತು, ನಿಮಗೆ ಉಪಕಾರವಾಗಲೆಂಬ ಮಾತ್ರಕ್ಕೆ ನಾನು ಇದನ್ನು ಖರೀದಿಸಬೇಕೆ?....". ಇದು ಕೇವಲ ವ್ಯವಹಾರ ನಿರಾಕರಣೆಯಲ್ಲ, ಅದು ದರ್ಪ, ಅಹಂಕಾರದ ಪ್ರತಿಬಿಂಬವಾಗಿತ್ತು, ಭಾರತೀಯ ಉದ್ಯಮದ ಸಾಮರ್ಥ್ಯವನ್ನು ತಿರಸ್ಕರಿಸುವಂತಿತ್ತು.

**ಕಾಲ ಬದಲಾದಾಗ:** 2008ರಲ್ಲಿ ಜಾಗ್ವಾರ್ ಮತ್ತು ಲ್ಯಾಂಡ್ ರೋವರ್ – ಬ್ರಿಟನ್ನಿನ ಅತ್ಯಂತ ಪ್ರತಿಷ್ಠಿತ ಆಟೋಮೊಬೈಲ್ ಬ್ರಾಂಡ್‌ಗಳು ಆರ್ಥಿಕ ಸಂಕಷ್ಟದಲ್ಲಿದ್ದವು. ಅದೇ ಫೋರ್ಡ್ ಕಂಪನಿ ಅವುಗಳನ್ನು ಮಾರಾಟ ಮಾಡಲು ಮುಂದಾಯಿತು. ಈ ಮಾತುಕತೆಯ ವ್ಯಕ್ತಿ ಅದೇ – ರತನ್ ನವಲ್ ಟಾಟಾ.

ಈ ಬಾರಿ ಭಾರತೀಯ ಕಂಪನಿ ಖರೀದಿದಾರನ ಸ್ಥಾನದಲ್ಲಿತ್ತು. ಆದರೆ ಇಲ್ಲಿ ದರ್ಪವಿರಲಿಲ್ಲ. ಅಹಂಕಾರವಿರಲಿಲ್ಲ. ಇದ್ದದ್ದು ಗೌರವ, ಪರಿಪಕ್ವತೆ ಮತ್ತು ದೂರದೃಷ್ಟಿತ್ವ ಮಾತ್ರ.

ರತನ್ ಟಾಟಾ ಅವರು JLR ಅನ್ನು ಖರೀದಿಸಿದಾಗ, "JLR ಖರೀದಿಸಿ ನಮಗೆ ಉಪಕಾರ ಮಾಡಿದಿರಿ" ಎಂದು ಫೋರ್ಡ್ ಮುಖ್ಯಸ್ಥರು ಹೇಳುವಂತಾದರೂ, ಅದು "ಒಮ್ಮೆ ಅವಮಾನ ಮಾಡಿದವರಿಂದ ಈಗ ನಾವು ಕೊಂಡೆವು" ಎಂಬ ಕಥೆಯಾಗಿರಲಿಲ್ಲ. ಬದಲಿಗೆ, "ಒಳ್ಳೆಯ ಸಂಸ್ಥೆಯನ್ನು ಉಳಿಸುವ ಹೊಣೆಗಾರಿಕೆ" ಎಂಬ ಮೌಲ್ಯದ ಮಾತಾಯಿತು. ಅವರು ಜಾಗ್ವಾರ್ ಮತ್ತು ಲ್ಯಾಂಡ್ ರೋವರ್‌ನ ಪರಂಪರೆಯನ್ನು ಕಿತ್ತುಕೊಳ್ಳಲಿಲ್ಲ; ಅದನ್ನು ಉಳಿಸಿದರು. ಉದ್ಯೋಗಗಳನ್ನು ರಕ್ಷಿಸಿದರು. ಸ್ವತಂತ್ರತೆಗೆ ಅವಕಾಶ ನೀಡಿದರು.

ಇಲ್ಲಿ ಇತಿಹಾಸ ನೀಡುವ ಪಾಠ ಸ್ಪಷ್ಟ: ದರ್ಪ ಕ್ಷಣಿಕ ಶಕ್ತಿಯನ್ನು ನೀಡಬಹುದು, ಆದರೆ ದೂರದೃಷ್ಟಿತ್ವ ಶಾಶ್ವತ ಗೌರವವನ್ನು ಕೊಡುತ್ತದೆ. ಅಲ್ಲಿಯೇ ರತನ್ ಟಾಟಾ ಅವರ ನಾಯಕತ್ವ ವಿಭಿನ್ನವಾಗಿ ಕಾಣಿಸುತ್ತದೆ. ಅವಮಾನಕ್ಕೆ ಪ್ರತೀಕಾರವಲ್ಲ, ಅವಮಾನಕ್ಕಿಂತ ದೊಡ್ಡ ಸಾಧನೆಯೇ ಉತ್ತರ ಎಂಬುದನ್ನು ಜಗತ್ತಿಗೆ ತೋರಿಸಿದ ಕಥೆ. *(28 ಡಿಸೆಂಬರ್ ರತನ್ ಟಾಟಾ ಹುಟ್ಟಿದ ದಿನ)*

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಡಿಸೆಂಬರ್ 23ರ ಸಭೆಯ ಛಾಯಾಚಿತ್ರಗಳು
















## ಕಾರ್ಯದರ್ಶಿಯವರ ವರದಿ

23/12/2025ರಂದು ರೋಟರಿ ಐಸಿರಿಯ 23ನೇ ವಾರದ ಸಭೆ RCC ಕಾರ್ಯಾಲಯದಲ್ಲಿ ನಡೆಯಿತು. ಜೊತೆಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಅವರು ಅಧ್ಯಕ್ಷರನ್ನು ಹಾಗೂ ನಿಯೋಜಿತ ಅಧ್ಯಕ್ಷರನ್ನು ವೇದಿಕೆಗೆ ಆಹ್ವಾನಿಸಿದರು. ರೊ. ಅಶೋಕ್ ನಾಯಕ್ ಕೊರಳ ಲಾಂಛನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು.

ರೊ. ಗೀತಾಶ್ರೀ ಎಂ ಉಪಾಧ್ಯ ಅವರು ಪ್ರಾರ್ಥನೆ ನಡೆಸಿದರು. ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ಜೊತೆ ಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಅವರು ಕಳೆದ ವಾರದ ವರದಿಯನ್ನು ಮಂಡಿಸಿದರು.

ಸ್ಪೋರ್ಟ್ಸ್ ಕಾರ್ಡಿನರ್ ರೊ. ಅಶೋಕ್ ನಾಯಕ್ ಅವರು ಮಾತನಾಡಿ ಗವರ್ನರ್ ವಿಸಿಟ್ ನ ಯಶಸ್ಸಿಗೆ ಅಧ್ಯಕ್ಷರನ್ನು ಅಭಿನಂದಿಸಿದರು. ಇದರ ಹಿಂದೆ ವಿಶೇಷವಾಗಿ ಶ್ರಮಿಸಿದ ರೊ. ರಾಜೇಶ್ ಶೆಣೈ, ರೊ. ಗುರುಪ್ರಸಾದ್ ಕಾಮತ್ ಹಾಗೂ ರೊ. ಪ್ರಕಾಶ್ ಶೆಣೈ ಅವರನ್ನು ಅಭಿನಂದಿಸಿದರು. ಐಸಿರಿಯ ಒಗ್ಗಟ್ಟು ಯಶಸ್ಸಿಗೆ ಕಾರಣ ಎಂದರು. ಜಿಲ್ಲಾ ಸ್ಪೋರ್ಟ್ಸ್ ನಲ್ಲಿ ಭಾಗವಹಿಸಿ 2 ಬಹುಮಾನಗಳನ್ನು ಪಡೆದ ರೊ. ಸ್ವಾತಿ ಪೈ ಹಾಗೂ ಅವರ ಕುಟುಂಬ ರೋಟರಿ ಐಸಿರಿಗೆ ಮಾದರಿ ಎಂದರು. ವಿಶೇಷವಾಗಿ ಸ್ಪೋರ್ಟ್ಸ್ ಹಾಗೂ ಕಲ್ಚರಲ್ ನಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಐಸಿರಿಗೆ ಯಶಸ್ಸು ತಂದ Dr ಸ್ವಾತಿ ಅವರು ನಮಗೆಲ್ಲ ರೋಲ್ ಮಾಡೆಲ್ ಆಗಿದ್ದಾರೆ ಎಂದರು.

ಐಶ್ವರ್ಯ ವಾರದ ಸಂಚಿಕೆಯ 25ನೇ ಪ್ರತಿಯನ್ನು ರೊ. ನಾಗರಾಜ್ ಅವರು ಬಿಡುಗಡೆ ಮಾಡಿದರು. ಸಂಪಾದಕರಾದ ರೊ. ರಾಜೇಶ್ ಡಿ ಶೆಣೈ ಅವರು ಸಹಕರಿಸಿದರು.

ರೊ. ಸ್ಮಿತಾ ಜಿ ಕಾಮತ್ ಅವರು DG ವಿಸಿಟ್ ನ ಯಶಸ್ಸಿಗೆ ಕಾರಣರಾದ ಎಲ್ಲರನ್ನೂ ಶ್ಲಾಘಿಸಿದರು. ಅಧ್ಯಕ್ಷರ ಸ್ಥಿತಪ್ರಜ್ಞೆಯನ್ನು ಪ್ರಶಂಸಿಸಿದರು. ರೊ. ಸ್ವಾತಿ ಪೈ ಅವರ ಯಶಸ್ಸನ್ನು ಪ್ರಶಂಸಿಸಿ ಆ ಪ್ರಯುಕ್ತ ಒಂದು ಕುಟುಂಬ ಸ್ನೇಹಮಿಲನವನ್ನು ಜನವರಿ 14 ರಂದು ಆಯೋಜಿಸುವುದಾಗಿ ತಿಳಿಸಿದರು.

ರೊ. ಪಾಂಡುರಂಗ ಲಾಗ್ವಾಂಕರ್ ಅವರು ಅಧ್ಯಕ್ಷರನ್ನು ಹಾಗೂ ಸರ್ವ ಸದಸ್ಯರನ್ನು ಯಶಸ್ವಿಯಾಗಿ ಅರ್ಧ ವರ್ಷ ಪೂರೈಸಿದ್ದಕ್ಕಾಗಿ ಅಭಿನಂದಿಸಿದರು. ಮುಂದಿನ ಅರ್ಧ ವರ್ಷವೂ ಇದೇ ರೀತಿ ಮುಂದುವರೆಯಬೇಕು ಎಂದರು. ಜೊತೆಗೆ ರೊ. ಸ್ವಾತಿ ಪೈ ಅವರ ಯಶಸ್ಸನ್ನು ಪ್ರಶಂಸಿಸಿ ಅಭಿನಂದಿಸಿದರು.

ರೊ. ಮಂಜುನಾಥ್ ಉಪಾಧ್ಯ ಅವರು DG ವಿಸಿಟ್ ಯಶಸ್ಸಿಗಾಗಿ ಅಧ್ಯಕ್ಷರನ್ನು ಅಭಿನಂದಿಸಿದರು. ಮುಂದಿನ ಸಾಲಿನ ಅಧ್ಯಕ್ಷರಿಗೆ ಶುಭಾಶಯ ಕೋರಿದರು.

ರೊ. ರಾಜೇಶ್ ಡಿ ಶೆಣೈ ಅವರು 24 ವಾರದ ಬುಲೆಟಿನ್ ಗಳ ಸಂಕಲನದ ಒಂದು ಪ್ರತಿಯನ್ನು ಅಧ್ಯಕ್ಷರಿಗೆ ನೀಡಿದರು. ಈ ಸಂಕಲನ ತನ್ನ ಪೂರ್ವ ಯೋಜನೆಯೆಂದು ಸಹಕರಿಸಿದ ಎಲ್ಲ ಸದಸ್ಯರಿಗೆ ಧನ್ಯವಾದ ಹೇಳಿದರು.

ರೊ. ಪ್ರಕಾಶ್ ಶೆಣೈ ಅವರು ಐಸಿರಿಯ ಕಾರ್ಯಕ್ರಗಳು ಅತಿವೇಗದಲ್ಲಿ ನಡೆಯುತ್ತಿದ್ದು ಕೆಲವೊಮ್ಮೆ ಅವಕಾಶಗಳು ಬಂದಾಗ ಅಧ್ಯಕ್ಷರ ಅನುಮತಿ ಪಡೆದು ಮುಂದುವರೆಯಬೇಕಾದ ಸಂಧರ್ಭ ಇರುತ್ತದೆ. ಪ್ರತಿಭಾಸಿರಿ ಕಾರ್ಯಕ್ರಮ ಇದೇ ರೀತಿ ತ್ವರಿತವಾಗಿ ನಡೆಯಿತು. ಎಂದು ಹೇಳಿದರು. ಅಧ್ಯಕ್ಷರು ಅನುಭವ ಹೆಚ್ಚಿದಂತೆ ಒಳಗೊಳ್ಳುವಿಕೆ ಹೆಚ್ಚಿ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವುದು ಪ್ರಶಂಸನೀಯ ಎಂದರು.

ರೊ. ಗೀತಾಶ್ರೀ ಎಂ ಉಪಾಧ್ಯ ಅವರು DG ವಿಸಿಟ್ ಯಶಸ್ವಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಜೊತೆಗೆ ಜಿಲ್ಲಾ ಕಾನ್ಫರೆನ್ಸ್ ಗೆ ಕನಿಷ್ಠ 10 ನೋಂದಣಿಯನ್ನು ಅಪೇಕ್ಷಿಸಿದರು.

ರೊ. ಗುರುಪ್ರಸಾದ್ ಕಾಮತ್ ಮಾತನಾಡಿ DG ವಿಸಿಟ್ ಅಥವಾ ಯಾವುದೇ ಕಾರ್ಯಕ್ರಮದಲ್ಲಿ ಎಲ್ಲರೂ ಇಲ್ಲ ಎನ್ನದೇ ಸಹಕಾರ ನೀಡಿ ಕೈ ಜೋಡಿಸಿದ್ದೆ ಯಶಸ್ಸಿಗೆ ಕಾರಣ ಎಂದರು. 23 ರಂದು ಇನ್ನಂಜೆ RCC ಯವರು ಮನೆ ಹಸ್ತಾಂತರ ಮಾಡಿದ್ದನ್ನು ಉಲ್ಲೇಖಿಸಿ RCC ಯವರು ಬಹಳಷ್ಟು ದೊಡ್ಡ ಮಟ್ಟದ ಕೆಲಸಗಳನ್ನು ಮಾಡಬಹುದು ಎಂದರು. ……

## "ಐಶ್ವರ್ಯ" 25ನೇ ಸಂಚಿಕೆ ಬಿಡುಗಡೆ



ರೊ.. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕದ ಇಪ್ಪತ್ತೈದನೇ ಸಂಚಿಕೆಯನ್ನು ರೊ. ನಾಗರಾಜ್ 23/12/2025 ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ 23ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ರೊ. ನಾಗರಾಜ್ ನಡೆಸಿ, ರೊ. PHF ಗುರುಪ್ರಸಾದ್ ಕಾಮತ್ ಅದೃಷ್ಟಶಾಲಿಯಾಗಿ ಆಯ್ಕೆಯಾದರು.

*(ಕಾರ್ಯದರ್ಶಿಯವರ ವರದಿ)* ನಿಯೋಜಿತ ಅಧ್ಯಕ್ಷರಾದ ಸಂದೀಪ್ ಕುಮಾರ್ ಅವರು DG ವಿಸಿಟ್ ನ ಯಶಸ್ಸನ್ನು ಮೆಲುಕು ಹಾಕಿಕೊಂಡರು. Dr ಸ್ವಾತಿಯವರನ್ನು ಪ್ರಶಂಸಿಸಿದರು. ಮತ್ತು ಐಸಿರಿಯ ಸದಸ್ಯರ ಒಳಗೊಳ್ಳುವಿಕೆಯನ್ನು ಮೆಚ್ಚಿಕೊಂಡರು.

ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಅವರು ಎಲ್ಲರ ಸಹಕಾರಕ್ಕೆ ವಂದಿಸಿದರು. ಪೋಲಿಯೋ ಲಸಿಕೆ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ ಎಂದರು. ಜೊತೆಗೆ ಸದಸ್ಯರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇದ್ದರೂ ಏರಿಯ ಏಳಿಗೆ ಒಂದೇ ಗುರಿಯಾಗಿಸಿ ಕೆಲಸ ಮಾಡೋಣ ಎಂದರು. ಅದೃಷ್ಟ ಶಾಲಿ ರೋಟರಿಯನ್ ಆಯ್ಕೆಯನ್ನು ರೊ. ನಾಗರಾಜ್ ನಡೆಸಿದರು. ಅದೃಷ್ಟಶಾಲಿ ವ್ಯಕ್ತಿಯಾಗಿ ರೊ. ಗುರುಪ್ರಸಾದ್ ಕಾಮತ್ ಅವರು ಆಯ್ಕೆಗೊಂಡರು. ರೊ. ಅಶೋಕ್ ನಾಯಕ್ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು.

ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.